ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಕೆ.ಆರ್.ನಗರ.

ಸಿ.ಸಿ. ನಂ. 1575/2019

ಪಿರ್ಯಾದುದಾರರುಃ ಸರ್ಕಾರದ ಪರವಾಗಿ ಕೆ.ಆರ್.ನಗರ ಪೋಲೀಸರು

ವಿರುದ್ಧ

ಆರೋಪಿತರುಃ
1. ಶ್ರೀನಿವಾಸ ಬಿನ್ ವಿಷಕಂಠಶೆಟ್ಟಿ 40 ವರ್ಷ.
2. ರತ್ನಮ್ಮ ಕೋಂ ಶ್ರೀನಿವಾಸ, 38 ವರ್ಷ.
ಇಬ್ಬರ ವಾಸಃ ತೊಂಡಾಳು ಗ್ರಾಮ,
ಹುಣಸೂರು ತಾಲ್ಲೂಕು.

## ದೋಷಾರೋಪಣೆ

ಶ್ರೀ. ಶ್ರೀನಾಥ್ ಕೆ. ಬಿ.ಎ.ಎಲ್. ಎಲ್‌ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ, ಕೆ.ಆರ್.ನಗರ ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ 06-04-2018 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೋಲೀಸ್ ಠಾಣಾ ಸರಹದ್ದು ಈ ನ್ಯಾಯಾಲಯದ ವ್ಯಾಪ್ತಿಗೊಳಪಡುವ ಕೆ.ಆರ್.ನಗರದ ಕುವೆಂಪು ಬಡಾವಣೆಯಲ್ಲಿ ವಾಸವಾಗಿರುವ ಚಾಸಾ-1 ಮುತ್ತುಶೆಟ್ಟಿಯವರ ಮನೆಗೆ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನೋದ್ದೇಶದಿಂದ ಬಂದು ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿದ್ದು ನೀವು ಭಾ.ದಂ.ಸಂ. ಕಲಂ 448 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನೋದ್ದೇಶದಿಂದ ಬಂದು ನಿಮ್ಮ ಮಗ ದಿಲೀಪ್ ಈತನ ಮೇಲೆ ಹುಣಸೂರು ಗ್ರಾಮಾಂತರ ಪೋಲೀಸ್ ಠಾಣೆಗೆ ನೀಡಿರುವ ದೂರನ್ನು ವಾಪಸ್ಸು ತೆಗೆದುಕೊಳ್ಳುವಂತೆ ವಿನಾಕಾರಣ ಚಾಸಾ-1 ರವರ ಮೇಲೆ ಜಗಳ ತೆಗೆದು ಬಾಯಿಗೆ ಬಂದಂತೆ ಬೋಳಿಮಕ್ಕಳ, ಸೂಳೆಮಕ್ಕಳ, ಇತ್ಯಾದಿಯಾಗಿ ಅವಾಚ್ಯ ಶಬ್ದಗಳಿಂದ ಬೈದಿದ್ದು ನೀವು ಭಾ.ದಂ.ಸಂ. ಕಲಂ 504 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನೋದ್ದೇಶದಿಂದ ಬಂದು ನೀವುಗಳು ಚಾಸಾ-1 ರವರಿಗೆ

ಕೈಗಳಿಂದ ಮೈಕೈಗೆ ಹೊಡೆದು ನೋವುಂಟುಪಡಿಸಿದ್ದು ನೀವು ಭಾ.ದಂ.ಸಂ. ಕಲಂ 323 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನೋದ್ದೇಶದಿಂದ ಬಂದು 1 ನಿಮ್ಮ ಮಗನ ಮೇಲೆ ಹುಣಸೂರು ಗ್ರಾಮಾಂತರ ಪೋಲೀಸ್ ಠಾಣೆಗೆ ನೀಡಿರುವ ದೂರನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ನಿನ್ನನ್ನು ಹಾಗೂ ನಿನ್ನ ಮಗನನ್ನು ಚಾಕುವಿನಿಂದ ಕೊಲೆ ಮಾಡುವುದಾಗಿ ಚಾಸಾ-1 ಮತ್ತು ಚಾಸಾ-3 ದಿನೇಶ್ ರವರಿಗೆ ಕೊಲೆ ಬೆದರಿಕೆ ಹಾಕಿದ್ದು ನೀವು ಭಾ.ದಂ.ಸಂ. ಕಲಂ 506 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡುತ್ತೀರಿ.

ಕೆ.ಆರ್.ನಗರ,

ದಿನಾಂಕಃ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ, ಕೆ.ಆರ್.ನಗರ.